KACD220021562024

Presented on : 16.07.2024
Registered on : 16.07.2024
Decided on : 02.04.2026
Duration : 01 years, 08 months, 17 days

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಚಳ್ಳಕೆರೆ.**

ಉಪಸ್ಥಿತರುಃ ಶ್ರೀ. ಪುನೀತ್ ಬಿ.ಆರ್., ಬಿ.ಎ. ಎಲ್‌ಎಲ್.ಬಿ.,

ಪ್ರ.ದ.ನ್ಯಾದಂ.ಯವರು, ಚಳ್ಳಕೆರೆ.

ದಿನಾಂಕ 2 ನೇ ಏಪ್ರಿಲ್ 2026

**ಸಿ ಸಿ ನಂಃ 1088/2024**

**ಪಿರ್ಯಾದಿದಾರರುಃ**

ನಾಯಕನಹಟ್ಟಿ ಪೊಲೀಸ್.
(ಸಹಾಯ ಸರ್ಕಾರಿ ಅಭಿಯೋಜಕರು)

**-ವಿರುದ್ಧ -**

**ಆರೋಪಿತರುಃ**

1. ಲಕ್ಷ್ಮೀದೇವಿ ಗಂಡ ತಿಪ್ಪೇಸ್ವಾಮಿ, ಸುಮಾರು 50 ವರ್ಷ.
2. ಕಾಯಿ ತಿಪ್ಪೇಸ್ವಾಮಿ, ಸುಮಾರು 55 ವರ್ಷ.

ಇಬ್ಬರಾ ವಾಸಃ ಎ ಕೆ ಕಾಲೋನಿ, ನಾಯಕನಹಟ್ಟಿ ಪಟ್ಟಣ,
ಚಳ್ಳಕೆರೆ ತಾಲ್ಲೂಕು.

(ಶ್ರೀ ಟಿ.ಟಿ.ಎ., ವಕೀಲರು)

| | | |
|---|---|---|
| ಅಪರಾಧ ಜರುಗಿದ ದಿನಾಂಕ | | 02.01.2024 |
| ಅಪರಾಧವನ್ನು ವರದಿ ಮಾಡಿದ ದಿನಾಂಕ | : | 05.01.2024 |
| ಆರೋಪಿತರನ್ನು ಬಂಧಿಸಿದ ದಿನಾಂಕ | | |

| | |
|---|---|
| ಪಿರ್ಯಾದುದಾರರ ಹೆಸರು | ಕೊಲ್ಲಮ್ಮ |
| ವಿಚಾರಣೆ ಪ್ರಾರಂಭವಾದ ದಿನಾಂಕ | 13.03.2026 |
| ವಿಚಾರಣೆ ಮುಕ್ತಾಯವಾದ ದಿನಾಂಕ | 13.03.2026 |
| ಆಪಾದನೆಗಳು | ಭಾ.ದಂ.ಸಂ.ಕಲಂ 504, 323, 324, 506 ಸಹ ಕಲಂ 34 |
| ನ್ಯಾಯಾಧೀಶರ ಅಭಿಪ್ರಾಯ | ನಿರ್ದೋಷಿ ಎಂದು ಪರಿಗಣಿಸಿದೆ. |

# ತೀರ್ಪು

ನಾಯಕನಹಟ್ಟಿ ಠಾಣೆಯ ಆರಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 504, 323, 324, 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ–**

ದಿನಾಂಕಃ 02.01.2024 ರಂದು ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಪಟ್ಟಣದ ಎ ಕೆ ಕಾಲೋನಿಯಲ್ಲಿ 1 ನೇ ಆರೋಪಿತನ ಅಂಗಡಿ ಮನೆಯ ಮುಂದಿನ ರಸ್ತೆಯಲ್ಲಿ ಚಾಸಾ–7 ರವರು ನಿಂತುಕೊಂಡಿರುವಾಗ 1 ನೇ ಆರೋಪಿ ಚಾಸಾ–7 ರವರಿಗೆ ನಮ್ಮ ಮನೆಯ ಮುಂದೆ ಮೋಟಾರ ಸೈಕಲ್ ಏಕೆ ನಿಲ್ಲಿಸಿದ್ದಿಯಾ ಹೋಗು ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಗಲಾಟೆ ಶಬ್ದ ಕೇಳಿ ಚಾಸಾ–1 ರವರು ಚಾಸಾ–7 ರವರ ಬಳಿ ಹೋದಾಗ ಆಕೆಗೂ ಸಹ ನೀನೇಕೆ ಬಂದೆ ಕತ್ತೆಸೂಳೆ, ಬೋಸೂಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ, ಕೂದಲಿಡಿದು ಎಳೆದಾಡಿ ನೆಲಕ್ಕೆ ಕೆಡವಿ ಕೈಕಾಲುಗಳಿಂದ ಮೈಕೈಗೆ

ಹೊಡೆದಿದ್ದು ಹಾಗೂ 2 ನೇ ಆರೋಪಿ ಕೈಕಾಲುಗಳಿಂದ ಚಾಸಾ–7 ರವರಿಗೆ ಹೊಡೆದಿದ್ದು ಹಾಗೂ 2 ನೇ ಆರೋಪಿತನು ಕೋಲಿನಿಂದ ಗಲಾಟೆ ಬಿಡಿಸಲು ಬಂದ ಚಾಸಾ–6 ರವರ ಬಲಗೈಗೆ ಹೊಡೆದಿದ್ದು ಅಲ್ಲದೇ ಆರೋಪಿತರು ಹೋಗುವಾಗ ನೀವು ಈ ದಿನ ಉಳಿದುಕೊಂಡಿದ್ದೀರಿ ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಪ್ರಾಣ ಸಹಿತ ಬಿಡುವುದಿಲ್ಲ ಅಂತ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504, 323, 324, 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ.

3. ಚಾಸಾ–1 ರವರು ಸಲ್ಲಿಸಿದ ಪ್ರಥಮ ಮಾಹಿತಿಯ ಮೇರೆಗೆ ಪೊಲೀಸರು ಠಾಣೆ ಗುನ್ನೆ ನಂಃ 4/2024 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಚಾಸಾ–10 ರವರು ತನಿಖೆಯನ್ನು ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆಯನ್ನು ಸಲ್ಲಿಸಿದ ನಂತರ, ಈ ನ್ಯಾಯಾಲಯದಿಂದ ಆರೋಪಿತರ ವಿರುದ್ಧ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ನ್ಯಾಯಾಲಯದ ಅದೇಶ ಜಾರಿಯಾದ ಮೇಲೆ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿತರಿಗೆ ದಂ. ಪ್ರ. ಸಂ. ಕಲಂ 207 ರಡಿಯಲ್ಲಿ ದೋಷಾರೋಪಣಾ ಪ್ರತಿ ನೀಡಲಾಯಿತು.

5. ಆರೋಪಿತರ ಮೇಲೆ ದೋಷಾರೋಪಣೆಯನ್ನು ಹೊರಿಸಲಾಗಿದ್ದು, ಆರೋಪಿತರು ತಪ್ಪು ಒಪ್ಪಿಕೊಳ್ಳದೆ ವಿಚಾರಣೆ ಆಗಲು ಕೇಳಿಕೊಂಡಿರುತ್ತಾರೆ. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಭೀತುಪಡಿಸಲು ಪ್ರಾಸಾ–1 ರಿಂದ 3 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ, ನಿಪಿ–1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಆರೋಪಿತರು ತಮ್ಮ ಮೇಲೆ ಮಾಡಲಾದ ದೋಷಾರೋಪಣೆಯನ್ನು ಅಲ್ಲಗಳೆದಿರುವುದರಿಂದ ಅಭಿಯೋಜನಾ ಪಕ್ಷದವರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿರುವಂತೆ ಪ್ರಕರಣವನ್ನು ನಿರೂಪಿಸಲು ಪ್ರಾಸಾ–1 ರಿಂದ 3 ರವರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಸದರಿ

ವಿಚಾರಣೆಯಲ್ಲಿ ಪ್ರಾಸಾ-1 ರಿಂದ 3 ರವರು ಅಭಿಯೋಜನೆಯ ಪರ ಸಾಕ್ಷ್ಯ ನುಡಿಯದೇ ಪ್ರಕರಣದಲ್ಲಿನ ಸಾರಾಂಶದ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಸದರಿ ಸಾಕ್ಷ್ಯವನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಲ್ಪಟ್ಟಿದ್ದರಿಂದ ಸ.ಸ.ಅ. ರವರು ಉಳಿದ ಅಭಿಯೋಜನ ಪರ ಸಾಕ್ಷ್ಯವನ್ನು ವಿಚಾರಣೆ ಮಾಡಬೇಕೆಂದು ಕೇಳಿದ ಮನವಿಯನ್ನು ತಿರಸ್ಕರಿಸಲಾಯಿತು. ಅಭಿಯೋಜನ ಪರ ಮಂಡಿಸಲಾದ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ತಿರುಳು ಇಲ್ಲದೇ ಇರುವುದರಿಂದ ಸಿ ಆರ್ ಪಿ ಸಿ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆ ಏನೂ ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

7. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

8. ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

(1) ದಿನಾಂಕಃ 02.01.2024 ರಂದು ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಪಟ್ಟಣದ ಎ ಕೆ ಕಾಲೋನಿಯಲ್ಲಿ 1 ನೇ ಆರೋಪಿತನ ಅಂಗಡಿ ಮನೆಯ ಮುಂದಿನ ರಸ್ತೆಯಲ್ಲಿ ಚಾಸಾ-7 ರವರು ನಿಂತುಕೊಂಡಿರುವಾಗ 1 ನೇ ಆರೋಪಿ ಚಾಸಾ-7 ರವರಿಗೆ ನಮ್ಮ ಮನೆಯ ಮುಂದೆ ಮೋಟಾರ ಸೈಕಲ್ ಏಕೆ ನಿಲ್ಲಿಸಿದ್ದಿಯಾ ಹೋಗು ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಗಲಾಟೆ ಶಬ್ದ ಕೇಳಿ ಚಾಸಾ-1 ರವರು ಚಾಸಾ-7 ರವರ ಬಳಿ ಹೋದಾಗ ಆಕೆಗೂ ಸಹ ನೀನೇಕೆ ಬಂದೆ ಕತ್ತೆಸೂಳೆ, ಬೋಸೂಡಿ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದರಿಂದ, ಆರೋಪಿತರು ಭಾ. ದಂ. ಸಂ. ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತು ಪಡಿಸಿದ್ದಾರೆಯೇ?

(2) ಮೇಲ್ಕಂಡ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರೊಂದಿಗೆ ಜಗಳ ತೆಗೆದು 1 ನೇ ಆರೋಪಿ ಚಾಸಾ-

1 ರವರ ಕೂದಲಿಡಿದು ಎಳೆದಾಡಿ ನೆಲಕ್ಕೆ ಕೆಡವಿ ಕೈಕಾಲುಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಪಡಿಸಿದ್ದರಿಂದ, ಆರೋಪಿತರು ಭಾ. ದಂ. ಸಂ. ಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(3) ಮೇಲ್ಕಂಡ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರೊಂದಿಗೆ ಜಗಳ ತೆಗೆದು, 2 ನೇ ಆರೋಪಿ ಕೋಲಿನಿಂದ ಚಾಸಾ-6 ರವರ ಬಲಗೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಪಡಿಸಿದ್ದರಿಂದ, ಆರೋಪಿತರು ಭಾ. ದಂ. ಸಂ. ಕಲಂ 324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(4) ಮೇಲ್ಕಂಡ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರೊಂದಿಗೆ ಜಗಳ ತೆಗೆದು, ಆರೋಪಿತರು ಹೋಗುವಾಗ ನೀವು ಈ ದಿನ ಉಳಿದುಕೊಂಡಿದ್ದೀರಿ ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಪ್ರಾಣ ಸಹಿತ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿದ್ದರಿಂದ, ಆರೋಪಿತರು ಭಾ. ದಂ. ಸಂ. ಕಲಂ 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತು ಪಡಿಸಿದ್ದಾರೆಯೇ?

(5) ಯಾವ ಆದೇಶ?

9. ಈ ಮೇಲಿನ ಅಂಶಗಳಿಗೆ ನ್ಯಾಯಾಲಯ ಈ ಕೆಳಕಂಡಂತೆ ಉತ್ತರಿಸುತ್ತದೆಃ-

ಅಂಶ ನಂ.1 ರಿಂದ 4 ನಕಾರಾತ್ಮಕವಾಗಿ,

ಅಂಶ ನಂ.5 ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

10. **ಅಂಶ ನಂ.1 ರಿಂದ 4** - ಈ ಅಂಶಗಳು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆಯ ಅವಶ್ಯಕತೆ ಇದ್ದು, ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.ಅಭಿಯೋಜನೆಯ ಪ್ರಕಾರ,

ದಿನಾಂಕಃ 02.01.2024 ರಂದು ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಪಟ್ಟಣದ ಎ ಕೆ ಕಾಲೋನಿಯಲ್ಲಿ 1 ನೇ ಆರೋಪಿತನ ಅಂಗಡಿ ಮನೆಯ ಮುಂದಿನ ರಸ್ತೆಯಲ್ಲಿ ಚಾಸಾ–7 ರವರು ನಿಂತುಕೊಂಡಿರುವಾಗ 1 ನೇ ಆರೋಪಿ ಚಾಸಾ–7 ರವರಿಗೆ ನಮ್ಮ ಮನೆಯ ಮುಂದೆ ಮೋಟಾರ ಸೈಕಲ್ ಏಕೆ ನಿಲ್ಲಿಸಿದ್ದಿಯಾ ಹೋಗು ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಗಲಾಟೆ ಶಬ್ದ ಕೇಳಿ ಚಾಸಾ–1 ರವರು ಚಾಸಾ–7 ರವರ ಬಳಿ ಹೋದಾಗ ಆಕೆಗೂ ಸಹ ನೀನೇಕೆ ಬಂದೆ ಕತ್ತೆಸೂಳೆ, ಬೋಸೂಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ, ಕೂದಲಿಡಿದು ಎಳೆದಾಡಿ ನೆಲಕ್ಕೆ ಕೆಡವಿ ಕೈಕಾಲುಗಳಿಂದ ಮೈಕೈಗೆ ಹೊಡೆದಿದ್ದು ಹಾಗೂ 2 ನೇ ಆರೋಪಿ ಕೈಕಾಲುಗಳಿಂದ ಚಾಸಾ–7 ರವರಿಗೆ ಹೊಡೆದಿದ್ದು ಹಾಗೂ 2 ನೇ ಆರೋಪಿತನು ಕೋಲಿನಿಂದ ಗಲಾಟೆ ಬಿಡಿಸಲು ಬಂದ ಚಾಸಾ–6 ರವರ ಬಲಗೈಗೆ ಹೊಡೆದಿದ್ದು ಅಲ್ಲದೇ ಆರೋಪಿತರು ಹೋಗುವಾಗ ನೀವು ಈ ದಿನ ಉಳಿದುಕೊಂಡಿದ್ದೀರಿ ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಪ್ರಾಣ ಸಹಿತ ಬಿಡುವುದಿಲ್ಲ ಅಂತ ಪ್ರಾಣ ಬೆದರಿಕೆ ಹಾಕಿದ್ದು ಅಪರಾಧವಾಗಿರುತ್ತದೆ.

11. ತನ್ನ ಪ್ರಕರಣವನ್ನು ಸಾಭೀತುಪಡಿಸಲು ಅಭಿಯೋಜನೆಯು ತನ್ನ ಪರವಾಗಿ ಚಾಸಾ.1, 6 ಮತ್ತು 7 ರವರನ್ನು ಕ್ರಮವಾಗಿ ಪ್ರಾ.ಸಾ.1 ರಿಂದ 3 ಎಂದು ಸಾಕ್ಷಿ ವಿಚಾರಣೆ ಮಾಡಿ ಮತ್ತು ನಿಪಿ.1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

12. ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ "ಆರೋಪಿತರು ಎಂದಿಗೂ ತನಗೆ ಹಾಗೂ ಮತ್ತು ಚಾಸಾ–6 ಮತ್ತು 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಕೈಕಾಲುಗಳಿಂದ ಹಾಗೂ ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ಪೊಲೀಸರಿಗೆ ದೂರನ್ನು ನೀಡಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ಪ್ರಾಸಾ.1 ರವರು "ಸುಮಾರು ಎರಡು ವರ್ಷಗಳ ಹಿಂದೆ ನಿಪಿ.1 ಕ್ಕೆ ತಮ್ಮ ಮತ್ತು ಅರೋಪಿತರ ಮಧ್ಯೆ ಇದ್ದ ಭಿನ್ನಾಭಿಪ್ರಾಯವನ್ನು ತಿಳಿಸಲು ನಾಯಕನಹಟ್ಟಿ ಪೊಲೀಸ್ ಠಾಣೆಗೆ ಹೋದಾಗ ಪೋಲೀಸರು ತನ್ನ ಹಬ್ಬೆಟ್ಟಿನ ಗುರುತನ್ನು ಪಡೆದಿದ್ದು,

ಆದರೆ ಅದರಲ್ಲಿ ಏನು ಬರೆದಿರುತ್ತದೆ ಎಂದು ಗೊತ್ತಿಲ್ಲ" ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

13. ಫ್ರಾಸಾ.2 ಮತ್ತು 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ""ಆರೋಪಿತರು ಎಂದಿಗೂ ತಮಗೆ ಮತ್ತು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಕೈಕಾಲುಗಳಿಂದ ಹಾಗೂ ಯಾವುದೇ ವಸ್ತುವಿನಿಂದ ಹಲ್ಲೆ ಮಾಡಿರುವುದಿಲ್ಲ, ಫ್ರಾಣ ಬೆದರಿಕೆ ಹಾಕಿರುವುದಿಲ್ಲ, ಹಲ್ಲೆ ಕುರಿತು ತಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಹಾಗೂ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ" ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ಫ್ರಾಸಾ.3 ರವರು "ಸುಮಾರು ಎರಡು ವರ್ಷಗಳ ಹಿಂದೆ ನಿಪಿ.3 ಕ್ಕೆ ನಾಯಕನಹಟ್ಟಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ಆದರೆ ಯಾವ ವಿಚಾರಕ್ಕೆಂದು ಗೊತ್ತಿಲ್ಲ, ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ತನ್ನ ಸಮಕ್ಷಮ ಪಂಚನಾಮೆ ಜರುಗಿಸಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ " ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

ಮಾನ್ಯ ಸ.ಸ.ಅ. ರವರು ಸದರಿ ಸಾಕ್ಷಿಗಳನ್ನು ಪ್ರತಿಕೂಲ ಸಾಕ್ಷಿಗಳನ್ನಾಗಿ ಪರಿಣಿಸಿ ಪಾಟಿಸವಾಲು ಮಾಡಿದಾಗಲೂ ಅಭಿಯೋಜನೆಯ ಪರ ಯಾವುದೇ ಪೂರಕ ಹೇಳಿಕೆಗಳನ್ನು ನೀಡಿರುವುದಿಲ್ಲ.

14. ಮಾನ್ಯ ಸ.ಸ.ಅ. ರವರು ಇತರ ಸಾಕ್ಷಿಗಳಿಗೆ ಸಮನ್ಸ್ ಹೊರಡಿಸುವಂತೆ ಮನವಿ ಮಾಡಿಕೊಂಡಿರುತ್ತಾರೆ ಆದರೆ ಫ್ರಾಸಾ.1 ರಿಂದ 3 ರವರು ಮುಖ್ಯ ಮತ್ತು ಬಾದಿತ ಸಾಕ್ಷಿಗಳಾಗಿರುತ್ತಾರೆ ಅವರಲ್ಲದೇ ಬೇರೆ ಯಾರು ಸಹ ಬಾದಿತರಾಗಿರುವುದಿಲ್ಲ ಅವರೇ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಆದಕಾರಣ ಸದರಿ ಮನವಿಯನ್ನು ತಿರಸ್ಕರಿಸಿ, ಆರೋಪಿತರ ವಿರುದ್ಧ ಯಾವುದೇ ಅಪರಾಧಿಕ ಅಂಶಗಳು ಕಂಡು ಬರದೆ ಇದ್ದುದರಿಂದ ಕಲಂ 313 ಸಿ ಆರ್ ಪಿ ಸಿ ಅಡಿಯಲ್ಲಿನ ಆರೋಪಿತರ ಹೇಳಿಕೆಗಳನ್ನು ವಿನಾಯಿತಿಸಲಾಗಿದೆ.

**ಸಾಕ್ಷ್ಯ ವಿಶ್ಲೇಷಣೆ**

15. ಅಭಿಯೋಜನೆಯು ಈ ಪ್ರಕರಣವನ್ನು ಸಾಭಿತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ದೋಷರೋಪಣೆಯನ್ನು ಸಾಭಿತುಪಡಿಸಲು ವಿಚಾರಣೆ ಮಾಡಿದ ಸಾಕ್ಷಿಗಳು ಅಭಿಯೋಜನೆಗೆ ವ್ಯತರಿಕ್ತವಾದ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಕೇವಲ ದಾಖಲೆಗಳ ಆಧಾರದ ಮೇಲೆ ಪ್ರಕರಣವನ್ನು ಸಾಭೀತುಪಡಿಸಲು ಪ್ರಯತ್ನಿಸಲಾಗಿರುತ್ತದೆ, ಆದರೆ ಮೇಲೆ ಹೇಳಿದ ಅಂಶಗಳನ್ನು ಸಾಭೀತುಪಡಿಸಲು ಮೌಖಿಕ ಸಾಕ್ಷ್ಯದ ಅವಶ್ಯಕತೆ ಇರುತ್ತದೆ. ಸದರಿ ಪ್ರಕರಣದಲ್ಲಿ ಫ್ರಾಸಾ.1 ರಿಂದ 3 ರವರು ಬಾಧಿತ ಪ್ರಥಮ ವರದಿಗಾರರು ಅಭಿಯೋಜನೆಯ ಮುಖ್ಯ ಪ್ರತ್ಯೇಕ್ಷ ಸಾಕ್ಷಿಗಳಾಗಿದ್ದು, ಅವರೇ ಅಭಿಯೋಜನೆಯ ಪರ ಸಾಕ್ಷ್ಯ ನುಡಿಯದೆ ಇರುವುದರಿಂದ, ಆರೋಪಿತರ ವಿರುದ್ಧ ಯಾವುದೇ ಅಪರಾಧ ಮಾಡಿದ ಬಗ್ಗೆ ನಿಸ್ಸಂಶಯುತವಾಗಿ ಸಾಭೀತುಪಡಿಸಲು ಅಭಿಯೋಜನೆಗೆ ಸಾಧ್ಯವಾಗದೆ ಇರುವುದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಮೇಲಿನ ಅಂಶಗಳಿಗೆ ಈ ಮೂಲಕ ನಕಾರಾತ್ಮಕವಾದ ಉತ್ತರವನ್ನು ನೀಡಲಾಗಿದೆ.

16. **ಅಂಶ ನಂ.5**– ಮೇಲೆ ಮಾಡಲಾದ ವಿವರವಾದ ಚರ್ಚೆ ಹಾಗೂ ಕಾರಣಗಳಿಂದ ಈ ಕೆಳಕಂಡಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆಃ–

# ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 504, 323, 324, 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಪಿ.ಆರ್.ನಂ.242/2025 ರಲ್ಲಿ ಜಫ್ತಾದ ಎರಡು ಕೋಲು ಮೌಲ್ಯರಹಿತವಾಗಿದ್ದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು 6 ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು ಎಂದು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿದ ನಂತರ, ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ ದಿನಾಂಕಃ 2 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಪುನೀತ್ ಬಿ.ಆರ್.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಯವರು, ಚಳ್ಳಕೆರೆ.

## ಅನುಬಂಧ

1) ಅಭಿಯೋಜನಾ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು–

| | |
|---|---|
| ಪ್ರಾಸಾ–1 | ಕೊಲ್ಲಮ್ಮ |
| ಪ್ರಾಸಾ–2 | ಮೈಲಾರಿ |
| ಪ್ರಾಸಾ–3 | ಲಿಂಗರಾಜು |

2) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ದಾಖಲಾತಿಗಳು

| | |
|---|---|
| ನಿಪಿ.1 | ಪ್ರಾಸಾ–1 ರವರ ಹೇಳಿಕೆ / ದೂರು |
| ನಿಪಿ.2 | ಪ್ರಾಸಾ–2 ರವರ ಹೇಳಿಕೆ |
| ನಿಪಿ 3 | ಸ್ಥಳ ಪಂಚನಾಮೆ |
| ನಿಪಿ.3(ಎ) | ಸಹಿ |
| ನಿಪಿ.4 | ಪ್ರಾಸಾ–3 ರವರ ಹೇಳಿಕೆ |

3) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ಮುದ್ದೆಮಾಲು

–ಇಲ್ಲಾ–

4) ಆರೋಪಿ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ಗುರುತಿಸಲಾಗಿದ ದಾಖಲಾತಿಗಳ

–ಇಲ್ಲಾ–

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಯವರು, ಚಳ್ಳಕೆರೆ.